ಖುಷಿ. ದೇವರ ದಯದಿಂದ ಸತ್ಯಭಾಮಾ ಸೋಶಿಯಾಲಜಿ ಡಿಪಾರ್ಟ್‌ಮೆಂಟಿನವಳಾಗಿದ್ದರಿಂದ ನಾವು ಬಚಾವು. ಆದರೆ, ಹಾಸ್ಟೆಲ್‌ನಲ್ಲಿ ಅವಳ ಉಪಟಳಕ್ಕೇನೂ ಕಡಿಮೆಯಿರಲಿಲ್ಲ. ''ನೀವು ರೂಮಿನಲ್ಲಿ ಏನದು ಶಬ್ದ ಮಾಡ್ತೀರಿ? ನನಗೆ ಡಿಸ್ಟರ್ಬ್ ಆಗುತ್ತೆ'' ಅಂತ ಸುಖಾಸುಮ್ಮನೆ ನಮ್ಮನ್ನು ತಡೆದು ವಿಚಾರಣೆ ಮಾಡುತ್ತಿದ್ದಳು.

ಇದೆಲ್ಲ ಗದ್ದಲದ ನಡುವೆ ಅವನು ಅದ್ಯಾವಾಗಲೋ ನನ್ನ ಪಕ್ಕದ ಡೆಸ್ಕಿನಲ್ಲಿ ಬಂದು ಕುಳಿತುಕೊಳ್ಳತೊಡಗಿದ; ನನಗೆ ಗೊತ್ತೇ ಆಗಲಿಲ್ಲ. ನೋಡನೋಡುತ್ತಿದ್ದಂತೆ ನಮ್ಮ ಕ್ಲಾಸ್‌ರೂಮಿನಲ್ಲಿ ನಮ್ಮ ನಮ್ಮ ಜಾಗಗಳು ಹೆಚ್ಚುಕಡಿಮೆ ಫಿಕ್ಸ್ ಆಗಿಬಿಟ್ಟವು. ಅವನು ಯಾವಾಗಲೂ ನನ್ನ ಪಕ್ಕದ ಡೆಸ್ಕಿನಲ್ಲೇ. ಪಾಠದ ಕಡೆ ಗಮನ ಇದ್ದರೂ ಮನದಲ್ಲೊಂದು ಸಣ್ಣ ಪುಳಕ. ಚಂಚಲತೆಯಿಂದ ಕಣ್ಣುಗಳು ನಿಧಾನ ಆಕಡೆಗೊಮ್ಮೆ ಚಲಿಸಿ, ಅವನನ್ನು ಓರೆಗಣ್ಣಿನಿಂದ ನೋಡುವುದು ಪ್ರೀತಿಯ ಹವ್ಯಾಸವಾಯ್ತು.

ಮಧ್ಯಾಹ್ನ ಕ್ಲಾಸುಗಳನ್ನು ಮುಗಿಸಿ ಹೊರಬಂದ ಮೇಲೆ, ಇಲ್ಲವೇ ಲೈಬ್ರರಿಗೆ ಹೋಗಿ ಸಂಜೆ ಮರಳುವಾಗ ಅಲ್ಲೆಲ್ಲೋ ನಿಂತವನು ಅಕಸ್ಮಾತ್ತಾಗಿ ಕಂಡಂತೆ ಕಣ್ಣರಳಿಸಿ ಜೊತೆಯಲ್ಲಿ ಹೆಜ್ಜೆ ಹಾಕತೊಡಗಿದ. ನಿಧಾನವಾಗಿ ನಡೆದು ನಮ್ಮ ಹಾಸ್ಟೆಲ್ ಬರುತ್ತಲೂ ಮರಳಿ ಹೋಗುತ್ತಿದ್ದ. ಯುನಿವರ್ಸಿಟಿ ಕ್ಯಾಂಪಸ್ಸಂತೂ ದೊಡ್ಡದಾಗಿ ಬೆಳೆದದ್ದು ಒಂದು ಕಟ್ಟಡದಿಂದ ಇನ್ನೊಂದಕ್ಕೆ ಹೋಗಬೇಕೆಂದರೆ ಸಾಕಷ್ಟು ದೂರ ನಡೆಯಬೇಕಿತ್ತು. ಈಗಿನಂತೆ ವಾಹನಗಳ ಹಾವಳಿ ಇಲ್ಲದ, ಕೇವಲ ಕಾಲ್ನಡಿಗೆಯ ವಿದ್ಯಾರ್ಥಿಗಳು, ಪ್ರೊಫೆಸರುಗಳು ಅತ್ತಿಂದಿತ್ತ ಓಡಾಡುವ ಕಾಲ. ಎಲ್ಲೆಲ್ಲೂ ಮರಗಳು, ಅವುಗಳಿಂದ ಉದುರಿದ ಹಳದಿ ಎಲೆಗಳು. ಕಾಡಿನ ನಿರ್ಜನ ದಾರಿಗಳಲ್ಲಿ ನಡೆಯುವ ಅನುಭವ. ಹೀಗಾಗಿ ನಡೆಯುವಾಗ ಅಚಾನಕ್ಕಾಗಿ ಜೊತೆಯಾಗುವ ಹುಡುಗರನ್ನು ಬೇಡವೆನ್ನುವ, ತಪ್ಪಿಸಿಕೊಳ್ಳುವ ಮೂರ್ಖಸಾಹಸವನ್ನು ಯಾವ ಹುಡುಗಿಯರೂ ಮಾಡುತ್ತಿರಲಿಲ್ಲ. ಮೇಲಾಗಿ ಹಾಗೆ ಜೊತೆ ನಡೆಯುವ ಸುಖದ ಅನುಭವವನ್ನು ಯಾಕಾದರೂ ಕಳೆದುಕೊಳ್ಳುತ್ತಾರೆ! ಹುಡುಗಿಯರು ನಾಚಿದಂತೆ ನಡೆಯುವುದೂ, ಹುಡುಗರು ಅವರ ಬಾಡಿಗಾರ್ಡ್‌ಗಳಂತೆ ಜೊತೆಗಿರುವುದೂ ಸಾಮಾನ್ಯ ದೃಶ್ಯ. ಬರಬರುತ್ತ ಅವನೂ ನನ್ನ ಬಾಡಿಗಾರ್ಡ್ ಆಗಿಬಿಟ್ಟ. ದಿನಾಲೂ ನನ್ನನ್ನು ಹಾಸ್ಟೆಲ್‌ವರೆಗೆ ಬಂದು ಕಳಿಸಿ ಹೋಗುವ, ಒಮ್ಮೊಮ್ಮೆ ಅಲ್ಲೇ ಕಾಂಪೌಂಡ್ ಹತ್ತಿರ ನಿಂತು ಹತ್ತು ನಿಮಿಷ ಇನ್ನೇನೋ ಮಾತನಾಡಿ ಹೋಗುವಷ್ಟು ಸಲಿಗೆ ಬೆಳೆಯಿತು. ಅವನೊಡನೆ ಮಾತನಾಡಿ ಬಂದ ಮೇಲೆ ಮೂರೂ ಮಹಡಿಗಳ ಮೆಟ್ಟಿಲುಗಳನ್ನು ಹಾರಿಕೊಂಡು ಹೋಗುತ್ತಿದ್ದೆ. ದೇಹ ಗಾಳಿಯಲ್ಲಿ ಚಲಿಸಿದಂತಿರುತ್ತಿತ್ತು. ಇಡೀ ರಾತ್ರಿ ಇಡೀ ಹಗಲು ಸುಖದಲ್ಲಿ ತೇಲಾಡುವಂಥ ಕನಸುಗಳು.

ಅವತ್ತೂ ಅವನು ಹೀಗೇ ನನ್ನೊಡನೆ ಹಾಸ್ಟೆಲ್‌ವರೆಗೆ ಬಂದು ಬಿಟ್ಟುಹೋದ ಮೇಲೆ ಹಾರುತ್ತ ಮೆಟ್ಟಲೇರುತ್ತಿದ್ದೆ. ''ಯಾರ್‍ಯಾರೋ ಹಳ್ಳಿಗುಗ್ಗುಗಳಿಗೆಲ್ಲಾ ಬಾಯ್‌ಫ್ರೆಂಡುಗಳು ಸಿಕ್ಕಿಬಿಡ್ತಾರಪ್ಪಾ, ಏನು ನೋಡಿ ಸ್ನೇಹಾ ಮಾಡ್ತಾರೋ ಏನೋ!'' ಸತ್ಯಭಾಮೆಯ ಚೂರಿಯ ಅಲುಗಿನಂಥ ಮಾತುಗಳು ಒಮ್ಮಿಲೇ ತೂರಿಬಂದು ನನ್ನೆದೆಯನ್ನು ಇರಿದವು. ತಕ್ಷಣ ಕುಣಿತದ ನಡಿಗೆ ಸ್ತಬ್ಧವಾಯಿತು. ಆದರೆ, ಅವಳಿಗೆ ಪ್ರತ್ಯುತ್ತರ ಕೊಡುವ ಮನಃಸ್ಥಿತಿಯಲ್ಲಿ ನಾನಿರಲಿಲ್ಲ. ಕಾಲುಕೆದರಿ ಜಗಳ ತೆಗೆದರೆ ಅದು ಅವಳ ಮುಂದೆ ಉಪಯೋಗವೂ ಇಲ್ಲ. ಅಷ್ಟಕ್ಕೂ ''ನಾನೆಲ್ಲಿ ನಿನಗೆ ಅಂದೆ? ಕುಂಬಳಕಾಯಿ ಕಳ್ಳ ಅಂದ್ರೆ ಹೆಗಲು ಮುಟಗೊಂಡು ನೋಡ್ತಾರಪ್ಪಾ ಜನಾ'' ಅಂತ ನನ್ನನ್ನೇ ಗೇಲಿ ಮಾಡಿದರೂ ಮಾಡಿದಳೇ. ಸುಮ್ಮನೇ ಸರಿದು ರೂಮು ಸೇರಿಕೊಂಡೆ.